ಸಿ.ಸಿ. ನಂ. 01/2024

ಪ್ರಾಸಾ- 2

ದಿನಾಂಕಃ 27-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ. ಎ ಎಲ್ ಕೆ ವಕೀಲರಿಂದ.**

ದೂರುದಾರರ ಪರಿಚಯ ನನಗೆ ಕಳೆದ 40 ವರ್ಷಗಳಿಂದ ಇರುತ್ತದೆ. ದೂರುದಾರರು ಸರ್ಕಾರಿ ನೌಕರರು ಎಂದರೆ ಸರಿ. ದೂರುದಾರರು ಆರೋಪಿಗೆ ಹಣ ನೀಡಲು ಎಲ್ಲಿಂದ ತೆಗೆದುಕೊಂಡು ಬಂದಿದ್ದರು ಎಂದು ಹೇಳಲು ಬರುವುದಿಲ್ಲ. ದೂರುದಾರರು ಯಾವ ಮುಖ ಬೆಲೆಯ ನೋಟುಗಳನ್ನು ಆರೋಪಿಗೆ ನೀಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಆರೋಪಿ ದೂರುದಾರರಿಗೆ ಪೊಲೀಸ ಠಾಣೆಯಲ್ಲಿ ಚೆಕ್ಕು ಕೊಟ್ಟಿರುತ್ತಾರೆ. ಆರೋಪಿ ದೂರುದಾರರಿಗೆ ನೀಡಿದ್ದಾರೆ ಎನ್ನಲಾದ ಚೆಕ್ಕಿನ ನಂಬರ ಹೇಳಲು ಬರುವುದಿಲ್ಲ. ಚೆಕ್ಕು ಆರೋಪಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಚೆಕ್ಕಿಗೆ ಸಹಿಯನ್ನು ಆರೋಪಿ ಮಾಡಿರುತ್ತಾರೆ. ಆರೋಪಿ ಚೆಕ್ಕು ನೀಡುವಾಗ ಅಲ್ಲಿ ಹನುಮಂತಪ್ಪ, ಕೃಷ್ಣಪ್ಪ ಹಾಗೂ ಇತರರು ಇದ್ದರು. ಆರೋಪಿ ತನ್ನ ಹೆಂಡತಿಯೊಂದಿಗೆ ಜಗಳವಾಡಿ ಪೊಲೀಸ ಠಾಣೆಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಪೊಲೀಸ ಠಾಣೆಯಲ್ಲಿ ಚೆಕ್ಕು ಕೊಟ್ಟಿಲ್ಲ, ನಾನು ಪೊಲೀಸ ಠಾಣೆಗೆ ಆ ದಿವಸ ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.